## ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ

## ಸಿ.ಸಿ. 486/2018

ಸಾಕ್ಷಿದಾರರ ಹೇಳಿಕೆಃ

| | | |
|---|---|---|
| **ಹೆಸರು** | : ಮಂಜುನಾಥ | ಚಾಸಾಃ **15** ಪ್ರಾಸಾಃ **5** |
| **ತಂದೆಯ ಹೆಸರು** | : ಚನ್ನಬಸಪ್ಪ | |
| **ವಯಸ್ಸು** | : 38 ವರ್ಷ | |
| **ವೃತ್ತಿ** | : ವ್ಯಾಪಾರ | |
| **ವಾಸಸ್ಥಳ** | : ಹನುಮನಹಳ್ಳಿ ಗ್ರಾಮ | |

ದಿನಾಂಕಃ **19-01-2026** ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ :-ಮಾನ್ಯ ಸ.ಸ.ಅ. ರವರಿಂದಃ

1 ನೇ ಆರೋಪಿ ಗೊತ್ತಿಲ್ಲ. ಮೃತ ಶ್ರೀನಿವಾಸ್ ಗೊತ್ತಿಲ್ಲ. ಚಾಸಾ-1, 12 ರಿಂದ 14 ಗೊತ್ತಿಲ್ಲ. ಮೃತ ಶ್ರೀನಿವಾಸ್ ಮತ್ತು ಚಾಸಾ-12 ರವರಿಗೆ ಅಪಘಾತ ಹೇಗೆ ಮತ್ತು ಯಾರ ತಪ್ಪಿನಿಂದ ಆಯಿತು ಎಂಬ ವಿಚಾರ ನನಗೆ ಗೊತ್ತಿಲ್ಲ. ಈಗೇ ಸುಮಾರು 6 ವರ್ಷಗಳ ಹಿಂದೆ ನನ್ನ ವೈಯಕ್ತಿಕ ಕೆಲಸದ ಮೇರೆಗೆ ಹೊನ್ನಾಳಿ ಪೊಲೀಸ್ ಠಾಣೆಗೆ ಹೋದಾಗ ಪೊಲೀಸರ ಕೋರಿಕೆಯ ಮೇರೆಗೆ 1 ದಾಖಲೆಗಳಿಗೆ ಸಹಿಯನ್ನು ಮಾಡಿರುತ್ತೇನೆ. ಅದರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನಾನು ಅಪಘಾತವನ್ನು ಕಣ್ಣಾರೆ ನೋಡಿರುವುದಿಲ್ಲ. ಈ ಬಗ್ಗೆ ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ.

ಪೊಲೀಸರಿಗೆ ಬರೆದುಕೊಟ್ಟ ಮುಚ್ಚಳಿಕೆ ಪತ್ರವನ್ನು ನಿಪಿ-13 ಎಂದು, ಸಾಕ್ಷಿಯ ಸಹಿಯನ್ನು ನಿಪಿ-13(ಎ) ಎಂದು ಗುರುತಿಸಲಾಯಿತು.

ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಅನುಮತಿ ಕೋರಿದ್ದಾರೆ. ಸೂಕ್ತ ಕಾರಣ ನೀಡಿದ ಮೇರೆಗೆ ಅನುಮತಿ ನೀಡಲಾಗಿದೆ.

<u>ಪಾಟೀ ಸವಾಲು:- ಮಾನ್ಯ ಸ.ಸ.ಅ. ರವರಿಂದ:-</u>

ದಿಃ 11-03-2018 ರಂದು ನಾನು ನನ್ನ ಹೊಟೇಲ್ ನಲ್ಲಿ ವ್ಯಾಪಾರ ಮಾಡುತ್ತಿರುವಾಗ ಹನುಮನಹಳ್ಳಿ ಬಸ್ ನಿಲ್ದಾಣದ ಕ್ರಾಸ್ ಹತ್ತಿರ ಸಂಜೆ 05-15 ಗಂಟೆ ಸಮಯದಲ್ಲಿ ಕುಂದೂರು ಕಡೆಯಿಂದ ಹೊನ್ನಾಳಿ ಕಡೆಗೆ 1 ನೇ ಆರೋಪಿಯು ಕೆಎ-15/ಎ-1716 ಮಹಿಂದ್ರಾ ಬುಲೆರೋ ಪಿಕಪ್ ವಾಹನವನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ನಿಯಂತ್ರಣ ತಪ್ಪಿ ತಿಮ್ಲಾಪುರ ಕಡೆಯಿಂದ ಕುಂದೂರು ಕಡೆಗೆ ಚಾಸಾ-12 ರವರು ಹಿಂಬದಿಯಲ್ಲಿ ಶ್ರೀನಿವಾಸ್ ರವರನ್ನು ಕೂರಿಸಿಕೊಂಡು ಮೋಟಾರ್ ಸೈಕಲ್ ನಂ.ಕೆಎ-02/ಇಪಿ-9607 ಮೋಟಾರ್ ಸೈಕಲ್ ಅನ್ನು ತಿರುವು ತೆಗೆದುಕೊಂಡಾಗ ಮೋಟಾರ್ ಸೈಕಲ್ ಗೆ ಡಿಕ್ಕಿ ಪಡಿಸಿದ್ದರಿಂದ ಚಾಸಾ-12 ಮತ್ತು ಶ್ರೀನಿವಾಸ್ ರವರು ಕೆಳಗೆ ಬಿದಿದ್ದು ನಾನು ಮತ್ತು ಚಾಸಾ-14 ಮತ್ತು 15 ರವರು ಹೋಗಿ ನೋಡಲಾಗಿ 2 ವಾಹನಗಳು ಜಕಂಗೊಂಡಿದ್ದುಚಾಸಾ-12 ರವರಿಗೆ ಮುಖ, ಕೈಕಾಲು ಮತ್ತು ಇತರ ಕಡೆ ಪೆಟ್ಟು ಬಿದ್ದು ರಕ್ತ ಗಾಯಗಳಾಗಿದ್ದು ಮತ್ತು ಮೃತ ಶ್ರೀನಿವಾಸ್ ರವರಿಗೆ ತಲೆಯ ಹಿಂಭಾಗ ಹಣೆ, ಕೈ ಕಾಲು ಮತ್ತು ಇತರ ಕಡೆ ಪೆಟ್ಟು ಬಿದ್ದು ರಕ್ತ ಗಾಯಗಳಾಗಿದ್ದು ನಂತರ ನಾವು ಅವರನ್ನು ಉಪಚರಿಸಿ 108 ಆಂಬುಲೆನ್ಸ್ ನಲ್ಲಿ ಹೊನ್ನಾಳಿ ಸರ್ಕಾರಿ ಆಸ್ಪತ್ರೆಗೆ ಕಳುಹಿಸಿಕೊಟ್ಟಿದ್ದು ಮತ್ತು ಶ್ರೀನಿವಾಸ್ ರವರು ಮಾರ್ಗದ ಮಧ್ಯದಲ್ಲೇ ಮೃತ ಪಟ್ಟಿರುತ್ತಾರೆ ಎಂದು ಮತ್ತು ಚಾಸಾ-12 ರವರು ಹೊನ್ನಾಳಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದುಕೊಂಡು ಹೆಚ್ಚಿನ ಚಿಕಿತ್ಸೆಗಾಗಿ ಶಿವಮೊಗ್ಗ ಸಹ್ಯಾದ್ರಿ ನಾರಾಯಣ ಹೃದಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತಾರೆ ಎಂದು ಮತ್ತು ಆರೋಪಿಯನ್ನು ಪುನಃ ನೋಡಿದರೆ ಗುರುತಿಸುತ್ತೇನೆ ಎಂದು ಪೊಲೀಸರಿಗೆ ನಿಪಿ-14 ರಂತೆ ಹೇಳಿಕೆಯನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲು :- ಆರೋಪಿತರ ಪರ ವಕೀಲರು ಇಲ್ಲ ಎಂದು ತಿಳಿಸಿರುತ್ತಾರೆ.

ಮರುವಿಚಾರಣೆ ಇಲ್ಲ .

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.